ಪಿಡಬ್ಲ್ಯೂ- 01 ಓ.ಎಸ್. ನಂಃ **234/2017**

ದಿನಾಂಕಃ **28.02.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃಃ **ಪ್ರತಿವಾದಿ ಪರ ಶ್ರೀ.ಜಿ.ಸಿ.ಸಿ ವಕೀಲರಿಂದ**

ನಾನು ನನ್ನ ಮನೆಯವ ಹತ್ತಿರ ಬಂದವರ ಮೇಲೆ ದಾವೆ ಹಾಕಿರುತ್ತೇನೆ. ಅವರ ಹೆಸರುಗಳು ಗೊತ್ತಿರುವುದಿಲ್ಲ. ದಾವಾ ಆಸ್ತಿಗೆ ತೊಂದರೆ ಕೊಟ್ಟ ಕಾರಣ ದಾವೆ ಹಾಕಿದ್ದೇನೆ. ನನಗೇ ಓದಲು ಬರೆಯುವುದಕ್ಕೆ ಬರದ ಕಾರಣ ನನಗೆ ದಾವಾ ಆಸ್ತಿ ಸಂಖ್ಯೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿ ಹೇಳಲು ಬರುವುದಿಲ್ಲ. ನಾನು ದಾವಾ ಪತ್ರದಲ್ಲಿ ಹೇಳಿರುವ ದಾವಾ ಸ್ವತ್ತಿನ ಚೆಕ್ಕುಬಂಧಿಯಂತೆ ದಾವೆಯನ್ನು ಹಾಕಿರುತ್ತೇನೆ. ನಾನು ದಾವಾ ಸ್ವತ್ತು ನನ್ನದೇ ಎಂದು ತೋರಿಸುವುದಕ್ಕೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ ಆದರೆ ಆ ದಾಖಲೆ ಯಾವುದು ಎಂದು ಹೇಳಲು ಬರುವುದಿಲ್ಲ. ದಾವಾಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳು ನನ್ನ ಹೆಸರಿನಲ್ಲಿ ಯಾವುದು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 4 ರವರು ನನ್ನ ಮೇಲೆ ಕಾರ್ಯ ನಿರ್ವಹಣಾಧಿಕಾರಿ ನ್ಯಾಯಾಲಯದಲ್ಲಿ ವಿಪಿಸಿ ನಂ.3/16-17 ನೇ ಸಾಲಿನಲ್ಲಿ ನನ್ನ ಮೇಲೆ 30 X 20 ಅಡಿಯಷ್ಟು ಆಸ್ತಿಯನ್ನು ಅಕ್ರಮವಾಗಿ ದಾಖಲೆ ಮಾಡಿಕೊಂಡಿರುತ್ತೇನೆ ಎಂದು ವ್ಯಾಜ್ಯವನ್ನು ಹೂಡಿರುತ್ತಾರೆ ಮತ್ತು ಅದರಲ್ಲಿ ನಾನು ಪಕ್ಷಗಾರನಾಗಿರುತ್ತೇನೆ ಎಂದರೆ ಸರಿ. ಅದರಲ್ಲಿ ಆದೇಶ ಏನಾಗಿದೆ ಎಂದು ತಿಳಿದುಕೊಂಡಿಲ್ಲ.

ನನ್ನ ಹೆಸರಿನಲ್ಲಿ ಇದ್ದ ದಾವಾ ಸ್ವತ್ತಿನ ಖಾತೆ ವಜಾ ಆಗಿದೆ ಎಂದರೆ ಸರಿಯಲ್ಲ. ವಜಾ ವಾದ ಬಳಿಕ ಆಸ್ತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿದ್ದಾರೆ ಎಂದರೆ ಗೊತ್ತಿಲ್ಲ. ತದನಂತರ ದಾವಾ ಸ್ವತ್ತಿನ ಅಂಬೇಡ್ಕರ್ ಭವನಗೊಸ್ಕರ ಕಾಯ್ದಿರಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಕಾರ್ಯ ನಿರ್ವಹಣಾಧಿಕಾರಿ ನ್ಯಾಯಾಲಯದಲ್ಲಿ ವಿಪಿಸಿ ನಂ.3/16-17 ರ ಮೇಲೆ ಮೇಲ್ಮನವಿಯನ್ನು ಸಲ್ಲಿಸಿಲ್ಲ. ದಿಃ26.09.2017 ರಲ್ಲಿ ಜಿಲ್ಲಾ ಪಂಚಾಯಿತಿಯಿಂದ ವೈ ಹುಣಸೇನಹಳ್ಳಿ ಗ್ರಾಮದ ಪಿಡಿಓ ರವರಿಗೆ ದಾವಾಸ್ವತ್ತನ್ನು ಅಕ್ರಮವಾಗಿ ಸ್ವಾಧೀನದಲ್ಲಿ ಇದ್ದೇನೆ ಎಂದು ಪೋಲೀಸ್ ರವರ ಸಹಾಯದಿಂದ ತೆರುವುಗೊಳಿಸಲು ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ.

<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ
ಶಿಡ್ಲಘಟ್ಟ